ಇಸ್ಲಾಮೀ ವಿಶ್ವಾಸ

ವಿಶ್ವಾಸ ಎಂದರೆ, ಒಂದು ವಸ್ತು/ವಿಷಯದ ಮೇಲೆ ಮಾನವನಿಗೆ ಸುದೃಢವಾದ ಭರವಸೆ ಮತ್ತು ಪರಿಪೂರ್ಣವಾದ ಸಮಾಧಾನ ಇರುವುದು ಹಾಗೂ ಅದರಲ್ಲಿ ಸಂಶಯಕ್ಕೆ ಯಾವುದೇ ಆಸ್ಪದ ಇರುವುದಿಲ್ಲ ಎಂದರ್ಥ. ಇದರ ಆಧಾರದಲ್ಲಿಯೇ ಮಾನವನ ಧರ್ಮ ಮತ್ತು ಜೀವನ ವಿಧಾನವು ನಿರ್ಧರಿಸಲ್ಪಡುತ್ತದೆ. ಮಾನವೇತಿಹಾಸವು ಇಂತಹ ಅನೇಕಾರು ವಿಶ್ವಾಸಗಳಿಂದ ತುಂಬಿಕೊಂಡಿದೆ. ಜನರು ವಿವಿಧ ವಸ್ತುಗಳನ್ನು ತಮ್ಮ ಆರಾಧ್ಯವನ್ನಾಗಿ ಮಾಡಿಕೊಂಡಿದ್ದಾರೆ. ಒಮ್ಮೆ ವಿಗ್ರಹಗಳನ್ನು ಪೂಜಿಸಲಾಯಿತು, ಇನ್ನೊಮ್ಮೆ ನಕ್ಷತ್ರಗಳು ಮತ್ತಿತ್ತರ ಆಕಾಶ ಕಾಯಗಳನ್ನು ಪೂಜಿಸಲಾಯಿತು, ಮತ್ತೆ ಕೆಲವೊಮ್ಮೆ ಜನರು ತಮ್ಮ ಅರಸರನ್ನೇ ಆರಾಧ್ಯರನ್ನಾಗಿ ಮಾಡಿಕೊಂಡರು. ಈ ರೀತಿಯಾಗಿ ಮೋಸ ಹೋದ ಜನರು ಶೈತಾನನನ್ನು ಆರಾಧ್ಯ ಮತ್ತು ಪ್ರಭುವನ್ನಾಗಿ ಮಾಡಿಕೊಳ್ಳುತ್ತಾ ಸಾಗಿದರು. ಈ ಪೈಕಿ ಎಲ್ಲರ ವಾದವು, “ನಾವು ನಮ್ಮ ತಂದೆ-ತಾತಂದಿರು ಹೀಗೆ ಮಾಡುತ್ತಿರುವುದನ್ನೇ ಕಂಡಿರುವುದು” ಎಂಬುದಾಗಿರುತ್ತಿತ್ತು. ತದ್ವಿರುದ್ಧವಾಗಿ ಏಕದೇವನಾದ ಅಲ್ಲಾಹನನ್ನು ಆರಾಧ್ಯನನ್ನಾಗಿ ಅಂಗೀಕರಿಸಿದವರಿದ್ದಾರೆ. ಇಂತಹವರೇ ನಿಜವಾದ ಮುಸ್ಲಿಮರೆನಿಸಿಕೊಳ್ಳುತ್ತಾರೆ. ಇವರು ಪರಿಪಕ್ವ ಮತ್ತು ಸುದೃಢವಾದ ವಿಶ್ವಾಸವನ್ನು ಹೊಂದಿರುತ್ತಾರೆ. ಅದಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಾಗಿರುತ್ತಾರೆ.

ವಿಶ್ವಾಸವು ವಸ್ತುತಃ ಮನಸಾರೆ ಒಪ್ಪುವ, ನಾಲಗೆಯಿಂದ ಘೋಷಿಸುವ ಮತ್ತು ಅದರ ಬೇಡಿಕೆಗಳನ್ನು ಈಡೇರಿಸುವುದರ ಹೆಸರಾಗಿದೆ. ಈ ಮೂರು ವಿಷಯಗಳ ಪೈಕಿ ಯಾವುದಾದರೂ ಒಂದರಲ್ಲಿ ಕೊರತೆ ಅಥವಾ ನ್ಯೂನತೆ ಉಂಟಾದರೆ ವಿಶ್ವಾಸವನ್ನೇ ನಿಷ್ಕ್ರಿಯಗೊಳಿಸುತ್ತದೆ; ಮಾತ್ರವಲ್ಲ, ಕೆಲವೊಮ್ಮೆ ಅದಕ್ಕೆ ವಿರುದ್ಧವಾಗಿಯೇ ಪರಿಣಮಿಸುತ್ತದೆ. ವಿಶ್ವಾಸವೇ ಜೀವನದ ರಹದಾರಿಯನ್ನು ಬೆಳಗಿಸುವಂತಹ ಪ್ರಕಾಶ ದೀಪವಾಗಿದೆ. ಇದುವೇ ಜೀವನದ ಸಕಲ ಸಮಸ್ಯೆಗಳನ್ನು ಪರಿಹರಿಸುವಂತಹ ‘ಮಾಸ್ಟರ್ ಕೀ’ ಆಗಿದೆ.

ವಿಶ್ವಾಸಗಳ ಇತಿಹಾಸದಲ್ಲಿ ಇಸ್ಲಾಮೀ ವಿಶ್ವಾಸ ಮಾತ್ರವೇ ಎಲ್ಲಕ್ಕಿಂತಲೂ ಸ್ಪಷ್ಟ, ಸರಳವಾದ ವಿಶ್ವಾಸವಾಗಿದೆ. ಇದರಲ್ಲಿ ತತ್ವಶಾಸ್ತ್ರದಂತಹ ಜಟಿಲತೆಯಿಲ್ಲ, ಆಂತರಿಕ ರಹಸ್ಯಗಳಿಲ್ಲ, ವಕ್ರತೆ-ನ್ಯೂನತೆ ಇಲ್ಲ. ಇದೇ ಕಾರಣವಾಗಿ ಇತಿಹಾಸದ ಎಲ್ಲ ಕಾಲಘಟ್ಟದಲ್ಲಿಯೂ ಸನ್ಮನಸ್ಸುಳ್ಳವರು ಇದರೆಡೆಗೆ ಆಕರ್ಷಿತರಾಗುತ್ತಲೇ ಇರುತ್ತಾರೆ; ಬುದ್ಧಿ ಮತ್ತು ಪ್ರಕೃತಿಯ ಮಾನದಂಡದಲ್ಲಿ ಸರಿಯೆಂದು ಮನಗಂಡು ಇದನ್ನು ಅಂಗೀಕರಿಸುತ್ತಾರೆ ಹಾಗೂ ಇಹ-ಪರಗಳ ಅನುಗ್ರಹಗಳಿಗೆ ಭಾಜನರಾಗುತ್ತಿರುತ್ತಾರೆ.

* * * * *